ಶ್ರೀರಂಗನಾಥಸ್ವಾಮಿಯಲ್ಲಿ ಶರಣಾಗಿಬಿಟ್ಟ. ಅಂದಿನಿಂದ ರಾಮಾನುಜರ ಅಂತರಂಗಸೇವೆಯಲ್ಲಿ ತನ್ನನ್ನು ತಾನು ತೊಡಗಿಸಿಕೊಂಡ. ಎಡೆಬಿಡದೆ ಸೇವೆ ಮಾಡುತ್ತ, ಅವರ ಬೆಂಗಾವಲಿನವನಾದ. ಹೆಂಡತಿಯ ಮೇಲಿನ ಅವನ ಮೋಹವು ಸಂಪೂರ್ಣ ಕಳೆಯಿತು.

ಧನುರ್ದಾಸನಿಗೆ ಆಚಾರ್ಯರು ಇಷ್ಟು ಪ್ರಾಮುಖ್ಯತೆಯನ್ನು ಕೊಟ್ಟಿದ್ದು ಇತರ ಶಿಷ್ಯರಲ್ಲಿ ಅಸೂಯೆಯನ್ನು ಉಂಟುಮಾಡಿತು. ಅದು ಆಚಾರ್ಯರಿಗೆ ತಿಳಿದುಬಂತು. ಇದನ್ನು ನಿವಾರಿಸಲು ಅವರು ಒಂದು ಉಪಾಯ ಮಾಡಿದರು. ತಮ್ಮ ಅಂತರಂಗದ ಶಿಷ್ಯನೊಬ್ಬನನ್ನು ಕರೆದು ಹೀಗೆ ಹೇಳಿದರು: "ನಿನ್ನ ಗೆಳೆಯರು ಒಣಗಿಹಾಕಿರುವ ಬಟ್ಟೆಗಳನ್ನು ಮುಚ್ಚಿಡು. ಕೇಳಿದರೆ, 'ನನಗೇನೂ ಗೊತ್ತಿಲ್ಲ' ಎಂದು ಹೇಳು." ಆ ಶಿಷ್ಯ ಹಾಗೆಯೇ ಮಾಡಿದ. ಬಟ್ಟೆಗಳನ್ನು ಕಳೆದುಕೊಂಡ ಶಿಷ್ಯರು ಗುರುಗಳ ಹತ್ತಿರ ತಮ್ಮ ಅಳಲನ್ನು ತೋಡಿಕೊಂಡರು. ಅದಕ್ಕೆ ರಾಮಾನುಜರು, "ಚಿಂತಿಸಬೇಡಿ. ಧನುರ್ದಾಸನ ಮನೆಯಲ್ಲಿ ಹೇರಳವಾದ ಹಣವಿದೆ. ಅದನ್ನು ರಾತ್ರಿಯ ವೇಳೆ ಹೋಗಿ ಎತ್ತಿಕೊಂಡು ಬಂದು, ಅದರಿಂದ ಹೊಸಬಟ್ಟೆಗಳನ್ನು ಕೊಂಡುಕೊಳ್ಳಿ" ಎಂದರು. ಹೇಳಿದ್ದೇ ಸಾಕು, ಶಿಷ್ಯರು ಅದೇ ಕೆಲಸವನ್ನು ಮಾಡಲು ಹೊರಟರು. ಅಂದು ರಾತ್ರೆ, ಧನುರ್ದಾಸ ಮತ್ತು ಆತನ ಪತ್ನಿಯನ್ನು ರಾಮಾನುಜರು ಬಹಳ ಕಾಲ ತಮ್ಮಲ್ಲಿಯೇ ಉಳಿಸಿಕೊಂಡರು. ಶಿಷ್ಯರು ಮನೆಯ ಬೀಗ ಒಡೆದು ಹಣದ ಥೈಲಿಯನ್ನು ತರುವಷ್ಟರಲ್ಲಿ ಧನುರ್ದಾಸ ಹೆಂಡತಿಯೊಡನೆ ಮನೆಗೆ ಬಂದನು. ಶಿಷ್ಯರನ್ನು ಕಂಡು ಅವನಿಗೆ ಆಶ್ಚರ್ಯವಾಯಿತು.

ದಂಪತಿಗಳಿಬ್ಬರೂ ಶಿಷ್ಯರಿಗೆ ಯಾವ ರೀತಿಯಲ್ಲಿಯೂ ಅಪಮಾನಕಾರವಾದ ರೀತಿಯಲ್ಲಿ ನಡೆದುಕೊಳ್ಳಲಿಲ್ಲ. ಅದಕ್ಕೆ ಬದಲಾಗಿ, ಮನೆಯೊಳಗೆ ಕರೆದು ಕೂರಿಸಿ ಹಾಲು ಹಣ್ಣುಗಳನ್ನು ಆ ಶಿಷ್ಯರಿಗೆ ಸಮರ್ಪಿಸಿ ಉಪಚರಿಸಿದರು. ಇದರಿಂದಾಗಿ ಶಿಷ್ಯರಿಗೆ ತಾವು ಮಾಡಿದ ಕೃತ್ಯಕ್ಕೆ ಬಹಳ ನಾಚಿಕೆಯಾಯಿತು. ಒಂದನ್ನೂ ಬಿಡದೆ ಎಲ್ಲವನ್ನೂ ಅವನಿಗೆ ಹೇಳಿದರು. ಧನುರ್ದಾಸನು ಆ ರಾತ್ರಿ ಅವರೆಲ್ಲರನ್ನೂ ತನ್ನಲ್ಲೇ ಇರಿಸಿಕೊಂಡು ಉಪಚರಿಸಿದನು. ಮಾರನೆಯ ದಿನ ಎಲ್ಲರೂ ಗುರುಗಳಾದ ರಾಮಾನುಜಾಚಾರ್ಯರ ಹತ್ತಿರ ಬಂದರು. ಆಗ ಅವರು ಶಿಷ್ಯರಿಗೆ ಬುದ್ಧಿವಾದ ಹೇಳಿದರು: "ನೀವು ನಿಮ್ಮ ವಿದ್ಯೆ, ಹಣ, ಜಾತಿ – ಈ ಮೂರು ಮದಗಳಿಂದ ಕುರುಡರಂತೆ ಆಗಿದ್ದೀರಿ. ಜಾತಿಯಲ್ಲಿ ಬೇರೆಯವನಾದರೂ ಧನುರ್ದಾಸನು ಈ ಮೂರೂ ಮದಗಳಿಂದ ಮುಕ್ತನಾಗಿದ್ದಾನೆ. ಆದ್ದರಿಂದ ಅವನು ನಿಮಗಿಂತಲೂ ಶ್ರೇಷ್ಠನಾದ ಭಕ್ತ."

### ಕಡೆಯ ದಿನಗಳು

ರಾಮಾನುಜರು ಕರ್ನಾಟಕದಲ್ಲಿ ಸುಮಾರು ಇಪ್ಪತ್ತು ವರ್ಷಗಳ ಕಾಲ ನೆಲೆಸಿದ್ದರು. ಅವರು ಮೇಲುಕೋಟೆಯಲ್ಲಿ ಯತಿರಾಜ ಮಠವನ್ನು ಸ್ಥಾಪಿಸಿದರು. ಹಾಗೆಯೇ ಇನ್ನೂ ಅನೇಕ ದೇವಾಲಯಗಳು ಹಾಗೂ ಮಠಗಳ ನಿರ್ಮಾಣಕ್ಕೆ ಕಾರಣಕರ್ತರಾದರು. ಅನಂತರ ಶ್ರೀರಂಗಕ್ಕೆ ಹಿಂದಿರುಗಿದರು. ಅಲ್ಲಿ ಹಲವು ವರ್ಷಗಳನ್ನು ಕಳೆದರು. ಇಷ್ಟುಹೊತ್ತಿಗೆ ಅವರಿಗೆ ೧೨೦ ವರ್ಷ ವಯಸ್ಸಾಗಿತ್ತು. ಅವರ ಜೀವಿತಕಾರ್ಯಗಳೆಲ್ಲ ಈಗ ಸಮಾಪ್ತಗೊಂಡಿದ್ದವು. ಇನ್ನು ದೇಹತ್ಯಾಗ ಮಾಡಬೇಕೆಂದು ಅವರು ನಿರ್ಧರಿಸಿದರು. ಪರಾಶರ ಭಟ್ಟರೆಂಬ ಶಿಷ್ಯರನ್ನು ತಮ್ಮ ಉತ್ತರಾಧಿಕಾರಿಗಳಾಗಿ ನಿಯಮಿಸಿದರು. ತಾವು ದೇಹ ಬಿಡುವ ವಿಷಯವನ್ನು ತಮ್ಮ ಶಿಷ್ಯರಿಗೆ ತಿಳಿಸಿದರು. "ನಿಮ್ಮನ್ನು ಬಿಟ್ಟು ನಾವು ಅಗಲಲಾರೆವು" ಎಂದು ಶಿಷ್ಯರು ಕಣ್ಣೀರಿಟ್ಟರು. ಆಗ ಆಚಾರ್ಯರು ಶಿಲ್ಪಿಗಳನ್ನು ಕರೆಸಿ, ತಮ್ಮನ್ನೇ ಹೋಲುವ ಒಂದು ವಿಗ್ರಹವನ್ನು ಮಾಡಿಸಿ, ಅದರಲ್ಲಿ ತಮ್ಮ ಶಕ್ತಿಯನ್ನು ತುಂಬಿ, ಜೀವಕಳೆ ಬರುವಂತೆ ಮಾಡಿದರು. ಅದನ್ನು ಅವರ ಹುಟ್ಟೂರಾದ ಶ್ರೀಪೆರಂಬದೂರಿನಲ್ಲಿ ಸ್ಥಾಪಿಸಲಾಯಿತು. ಅದಕ್ಕೆ ಕ್ರಮವಾಗಿ ಪೂಜೆಯನ್ನೂ ಸಲ್ಲಿಸಲಾಯಿತು. ಕಡೆಗೆ ಅವರು ತಮ್ಮ ಶಿಷ್ಯರಿಗೆ, "ಮಕ್ಕಳೇ, ಈ ವಿಗ್ರಹವನ್ನು ನಾನೇ ಎಂದು ತಿಳಿಯಿರಿ. ಇದಕ್ಕೂ ನನಗೂ ಯಾವ ವ್ಯತ್ಯಾಸವೂ ಇಲ್ಲ ಎಂದು ಅರಿಯಿರಿ. ನಾನು ಈ ವಿಗ್ರಹದಲ್ಲಿಯೇ ನೆಲೆಸಿರುತ್ತೇನೆ" ಎಂದು ಸಮಾಧಾನ ಮಾಡಿದರು. ತಮ್ಮ ಶಿಷ್ಯರಿಗೆ ಅವರು ನೀಡಿದ ಅಂತಿಮ ಸಂದೇಶ ಹೀಗಿತ್ತು: " ಅಹಂಕಾರವನ್ನು ತ್ಯಜಿಸಿ, ಭಗವದ್ಭಕ್ತರನ್ನು ಗೌರವಿಸಿ. ಎಲ್ಲ ಜನರೂ ಭಗವಂತನ ಮಕ್ಕಳೇ ಎಂದು ತಿಳಿದು, ಅವರ ಸೇವೆ ಮಾಡಿ. ಇತರರ ದೋಷವನ್ನು ನೋಡಿ, ಅವರನ್ನು ಹೀಗಳೆಯಬೇಡಿ. ಶುದ್ಧ ಮನಸ್ಸು ಮತ್ತು ಶುದ್ಧ ಆಚರಣೆಗಳೇ ಮುಖ್ಯವಾದುವು."

ಭಗವದ್ರಾಮಾನುಜರು ಶಾಲಿವಾಹನ ಶಕೆ ೧೦೫೯ನೆಯ ಸಂವತ್ಸರದಲ್ಲಿ, ಅಂದರೆ ೧೧೩೭ನೇ ಇಸವಿ ಮಾಘ ಮಾಸದ ದಶಮಿಯಂದು ಪರಮಪದವನ್ನು ಪಡೆದರು. ರಾಮಾನುಜರ ಪಂಥವನ್ನು ಅವರ ೭೪ ಮಂದಿ ಶಿಷ್ಯರು ಭಾರತದಾದ್ಯಂತ ಹರಡಿ, ಅನೇಕ ಮಠಗಳನ್ನು ಸ್ಥಾಪಿಸಿದರು. ⌘

**ಅಖಿಲಭುವನಜನ್ಮಸ್ಥೇಮಭಂಗಾದಿಲೀಲೇ**
**ವಿನತವಿವಿಧಭೂತವ್ರಾತರಕ್ಷೈಕದೀಕ್ಷೇ ।**
**ಶ್ರುತಿಶಿರಸಿ ವಿದೀಪ್ತೇ ಬ್ರಹ್ಮಣಿ ಶ್ರೀನಿವಾಸೇ**
**ಭವತು ಮಮ ಪರಸ್ಮಿನ್ ಶೇಮುಷೀ ಭಕ್ತಿರೂಪಾ ॥**

"ಅಖಿಲ ಜಗತ್ತಿನ ಸೃಷ್ಟಿ–ಸ್ಥಿತಿ–ಲಯವೇ ಮೊದಲಾದವು ಯಾವನಿಗೆ ಲೀಲೆಯಾಗಿವೆಯೋ, ಶರಣಾಗತರಾದ ವಿವಿಧ ಪ್ರಾಣಿಸಮೂಹಗಳ ರಕ್ಷಣೆಯೊಂದೇ ಯಾವನಿಗೆ ದೀಕ್ಷೆಯಾಗಿದೆಯೋ, ಶ್ರುತಿಗಳಿಗೆ ಶಿರಸ್ಸೆನಿಸಿದ ಉಪನಿಷತ್ತುಗಳಲ್ಲಿ ಯಾವನು ವಿಶೇಷವಾಗಿ ಪ್ರತಿಪಾದಿತನಾಗಿದ್ದಾನೆಯೋ, ಆ ಪರಬ್ರಹ್ಮನಾದ ಶ್ರೀನಿವಾಸನಲ್ಲಿ ನನಗೆ ಭಕ್ತಿರೂಪವಾದ ಜ್ಞಾನವುಂಟಾಗಲಿ.

*–ಶ್ರೀರಾಮಾನುಜರ ಶ್ರೀಭಾಷ್ಯದ ಮಂಗಳಾಚರಣ*